ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು 'ಮೈಥಿಲಿ ವಿಶ್ವವಿದ್ಯಾಲಯ' ಎಂಬ ಬೀನಾಮಿ ವಿಶ್ವವಿದ್ಯಾನಿಲಯದ ಬಿ. ಎಡ್. ಡಿಗ್ರಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿದ ದೂರಿನ ಬಗ್ಗೆ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಬೆಂಗಳೂರು ಅವರು ಕೂಲಂಕಷ ವಿಚಾರಣೆ ನಡೆಸಿರುತ್ತಾರೆ.

ವಿಚಾರಣೆಯಲ್ಲಿ ಕಂಡು ಬಂದಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂರು ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರು (ಈ ಕೆಳಗೆ ಸೂಚಿಸಿದಂತೆ) ಮೈಥಿಲಿ ವಿಶ್ವವಿದ್ಯಾಲಯದ ಬಿ.ಎಡ್. ಡಿಗ್ರಿ ಪಡೆದಿರುವುದಾಗಿ ಪ್ರಮಾಣ ಪತ್ರ ಒಪ್ಪಿಸಿ ಬಡ್ತಿ ಪಡೆದಿರುತ್ತಾರೆ.

೧. ಶ್ರೀ ಗಣಪತಿ ಭಟ್ಟ

೨. ಶ್ರೀ ವಿಜಯ ವಿಠಲ,

೩. ಶ್ರೀ ಎಂ. ರಾಧಾಕೃಷ್ಣ ಭಟ್.

ಈ ಮೂರು ಮಂದಿ ಶಿಕ್ಷಕರನ್ನೂ ಹಿಂಬಡ್ತಿ ನೀಡಿ ಸಹನಿರ್ದೇಶಕರು ಆದೇಶ ಜಾರಿ ಮಾಡಿರುತ್ತಾರೆ. ಅಲ್ಲದೆ ಅವರಿಗೆ ಹೆಚ್ಚುವರಿಯಾಗಿ ಪಾವತಿಯಾದ ವೇತನವನ್ನು ಕಟಾವು ಮಾಡಲು ಆದೇಶಿಸಿರುತ್ತಾರೆ. ಆದರೆ ಈ ಶಿಕ್ಷಕರು ಹಿಂಬಡ್ತಿ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಹೂಡಿದ್ದು, ನ್ಯಾಯ ಮಂಡಳಿಯು ಹಿಂಬಡ್ತಿ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತಾರೆ. ಮೇಲ್ಕಂಡ ಸಹಶಿಕ್ಷಕರುಗಳಿಗೆ ಮುಂಬಡ್ತಿಗೊಳಿಸುವ ಬಗ್ಗೆ ಇರುವ ಅರ್ಜಿಯ ಮೇಲೆ ತೀರ್ಪು ಬಂದ ನಂತರ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

## ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಸಕಲ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕಾಗಿ ರೂಪಿಸಲ್ಪಟ್ಟ, ರಚಿಸಲ್ಪಟ್ಟ, ವಿನ್ಯಾಸಲಾಗಿರಿಸಲ್ಪಟ್ಟ ರಂಗಮಂದಿರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ರಾಜ್ಯದ ಎಲ್ಲೆಡೆಯ ಸಾಂಸ್ಕೃತಿಕ ತಂಡಗಳಿಗೂ ಇಲ್ಲಿ ಪ್ರದರ್ಶನಕ್ಕೆ ಸಾಕಷ್ಟು ಅವಕಾಶ ಬೇಕು. ಆದರೆ, ಕಲಾಕ್ಷೇತ್ರ ಖಾಲಿ ಇದ್ದಾಗಲೂ ಸಹಾ ಯಕ್ಷಗಾನ ಪ್ರದರ್ಶನಕ್ಕೆ ಇತ್ತೀಚೆಗೆ ಅವಕಾಶ ನೀಡುವುದಿಲ್ಲವೆಂದು ತಿಳಿದು ಬಂದಿದೆ. ಕನ್ನಡ ನಾಡಿನ ಸುಂದರ ಸುರಮ್ಯ ಜಾನಪದ ಪ್ರಾಕಾರವಾದ ಯಕ್ಷಗಾನವನ್ನು ಅವಕಾಶ ಇದ್ದಾಗ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲು ಅನುವು ಮಾಡಿಕೊಡ ಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗಿರುವ ನಿಯಮಾವಳಿಗಳ ಪ್ರಕಾರ ರವೀಂದ್ರ ಕಲಾಕ್ಷೇತ್ರದಲ್ಲಿ ಕಲಾತಂಡಗಳಿಗೆ ಬೆಳಿಗ್ಗೆ ೬ ಘಂಟೆಯಿಂದ ಮಧ್ಯಾಹ್ನ ೨ ಘಂಟೆಯವರೆಗೆ ಮತ್ತು ಮಧ್ಯಾಹ್ನ ೨ ಘಂಟೆಯಿಂದ ರಾತ್ರಿ ೧೦ ಘಂಟೆಯವರೆಗೆ ಎರಡು ಪಾಳಿಗಳಲ್ಲಿ ಅವಕಾಶ ನೀಡಲಾಗುತ್ತಿದೆ. ಈ ಅವಧಿಯಲ್ಲಿ ರವೀಂದ್ರ ಕಲಾಕ್ಷೇತವು ಖಾಲಿ ಇದ್ದಲ್ಲಿ ಯಾವುದೇ ಕಲಾ ತಂಡಗಳಿಗೆ (ಯಕ್ಷಗಾನ ತಂಡಗಳಿಗೂ) ನಿಯಮಾವಳಿಗಳ ಪ್ರಕಾರ ಅವಕಾಶವಿದೆ.

ಸರ್ಕಾರದ ಆದೇಶದ ಪ್ರಕಾರ ರಾತ್ರಿ ೧೦ ಗಂಟೆಯ ನಂತರ ರವೀಂದ್ರ ಕಲಾಕ್ಷೇತ್ರವನ್ನು ಕಾಯ್ದಿರಿಸಲು ಅವಕಾಶವಿರುವುದಿಲ್ಲ. ಈ ನಿಬಂಧನೆಯಂತೆ, ಕಲಾಕ್ಷೇತ್ರದ ನಿರ್ವಹಣೆ ಹಾಗೂ ಸಿಬ್ಬಂದಿ ಅವಶ್ಯಕತೆ ಇರುವುದರಿಂದ ರಾತ್ರಿ ೧೦ ಗಂಟೆಯ ನಂತರ ನೀಡುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಗಳಿಗೆ, ನಿಯಮಾವಳಿಗೊಳಪಟ್ಟು ಕಾಯ್ದಿರಿಸಲು ಅವಕಾಶವಿದೆ.

## ವಿಧಾನಸೌಧ, ಹೈಕೋರ್ಟ್ ಮತ್ತು ಶಾಸಕರ ಭವನಕ್ಕೆ ಬರುವ ಸಾರ್ವಜನಿಕರಿಗೆ ಸುಲಭ ಶೌಚಾಲಯದ ವ್ಯವಸ್ಥೆ

ಶ್ರೀ ಪರಿಕಲ್ ಎಂ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಈ ಕೆಳಕಂಡ ವಿಚಾರದ ಬಗ್ಗೆ ಸೆಳೆಯಲು ಇಷ್ಟಪಡುತ್ತೇನೆ. ವಿಧಾನಸೌಧ, ಹೈಕೋರ್ಟು, ಶಾಸಕರ ಭವನ ಇವುಗಳಿಗೆ ಪ್ರತಿದಿನ ಸಾವಿರಾರು ಜನ ಪ್ರವಾಸಿಗರು ಹಾಗೂ ಸಾಮಾನ್ಯ ಸಾರ್ವಜನಿಕರು ಭೇಟಿ ನೀಡುತ್ತಾರೆ. ಆದರೆ ಈ ಮೂರು ಬೃಹತ್ ಕಟ್ಟಡಗಳ ಹೊರಭಾಗದಲ್ಲಿ